**<u>ದಿನಾಂಕ 25.03.23. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಿಡಬ್ಲ್ಯೂ-1 ರವರ ಪಾಟೀಸವಾಲು ಪ್ರತಿವಾದಿ ಪರ ಶ್ರೀ . ಎ.ಎಲ್. ಎಸ್ ವಕೀಲರಿಂದಃ</u>**

1 ನಾನು ಬಿ.ಕಾಂ. ಪದವೀದರನಾಗಿರುತ್ತೇನೆ. ಪ್ರತಿವಾದಿಯು ನಿಮ್ಮ ಊರಿನವರು ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ತಂದೆಗೆ ಪರಿಚಯಸ್ಥರು. ಪಿಳ್ಳೇಗೌಡರಿಗೆ ಎಷ್ಟು ಜನ ಮಕ್ಕಳು ಹಾಗೂ ಎಷ್ಟು ಜನ ಹೆಂಡತಿಯರು ಇದ್ದಾರೆಂದು ನನಗೆ ಗೊತ್ತಿಲ್ಲ. ನಾನು ಕ್ರಯದ ಕರಾರು ಪತ್ರ ಮಾಡಿಕೊಳ್ಳುವಾಗ ನಾಲ್ಕು ಲಕ್ಷ ರೂ.ಗಳನ್ನು 1 ನೇ ಪ್ರತಿವಾದಿಗೆ ನೊಂದಣಿ ಕಛೇರಿಯಲ್ಲಿ ನಗದು ಮುಖಾಂತರ 500/- ರೂ. ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ. ಕ್ರಯದ ಕರಾರು ಪತ್ರ ಮಾಡಿಸಿಕೊಳ್ಳುವ ಬದಲು ಕ್ರಯಪತ್ರ ಮಾಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ದಾವಾ ಸ್ವತ್ತನ್ನು ನಾನು ಖುದ್ದಾಗಿ ನೋಡಿರುತ್ತೇನೆ. ಸದರಿ ಹಳೆಕೆರೆ ಗ್ರಾಮದಲ್ಲಿರುತ್ತದೆ. ಕೆ ಆರ್ ಪೇಟೆ ಹಾಗೂ ಪಾಂಡವಪುರ ಮುಖ್ಯ ರಸ್ತೆಯ ಅರ್ಧ ಕಿ.ಮೀ ಅಂತರದಲ್ಲಿ ದಾವಾ ಆಸ್ತಿ ಇರುತ್ತದೆಂದ ರೆ ಸರಿ. ದಾವಾ ಸ್ವತ್ತು ಗುಂಟೆಗೆ ಎಷ್ಟು ಬೆಲೆ ಎಂದು ನನಗೆ ಗೊತ್ತಿಲ್ಲ.

2. ದಾವಾ ಸ್ವತ್ತು ಒಂದು ಗುಂಟೆಗೆ ಅಕ್ಕ ಪಕ್ಕದವರನ್ನು ಕೇಳಿದಾಗ ಒಂದು ಗುಂಟೆಗೆ 4,000/- ರೂ. ಎಂದು ಹೇಳಿರುತ್ತಾರೆ. ನಾನು ದಾವಾ ಸ್ವತ್ತಿನ ಒಟ್ಟು ಸ್ವತ್ತಿಗೆ ಬೆಲೆಯನ್ನು ಮಾತನಾಡಿರುತ್ತೇನೆ. ಕ್ರಯದ ಕರಾರುಪತ್ರ ಮಾಡುವ ಪೂರ್ವದ 6 ತಿಂಗಳಿಂದ ನಮ್ಮನ್ನು ಕೇಳುತ್ತಿದ್ದರು. ನಾವು ದಾವಾ ಸ್ವತ್ತಿನ ಆಜು-ಬಾಜುದಾರರಾಗಿರುವುದಿಲ್ಲ. ನಾನು ಪಾಂಡವಪುರ ಟೌನ್ ನಿವಾಸಿಯಾಗಿರುತ್ತೇನೆ. ನನಗೆ ಕೃಷಿ ಜಮೀನುಗಳು ನಿಮ್ಮ ಹೆಸರಿನಲ್ಲಿ ಇರುವುದಿಲ್ಲವೆಂದರೆ ಸರಿ. ಸ್ವತ್ತನ್ನು ಖರೀದಿ ಮಾಡುವ ಸಲುವಾಗಿ ಪ್ರತಿವಾದಿ ಹಾಗೂ ಕೃಷ್ಣೇಗೌಡ ಹಾಗೂ ಕಾಳೆಗೌಡರು ಕೇಳಿರುತ್ತಾರೆ. ಸದರಿ ಕೃಷ್ಣೇಗೌಡ ಹಾಗೂ ಕಾಳೆಗೌಡರು ವಡ್ಡರಹಳ್ಳಿ ನಿವಾಸಿಗಳು. ವ್ಯಾಪಾರದ ಸಮಯದಲ್ಲಿ ನಾನು, ನನ್ನ ತಂದೆ ಸೇರಿರುತ್ತೇವೆ. ಆದರೆ ದಿನಾಂಕ ನನಗೆ ನೆನಪಿಲ್ಲ. ಆದರೆ ಸ್ಥಳ ಪಾಂಡವಪುರದಲ್ಲಿ ಸೇರಿರುತ್ತೇವೆ. ಪಿಳ್ಳೇಗೌಡರಿಗೆ 4 ಜನ ಗಂಡು ಮಕ್ಕಳು , ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತನ್ನು ಖರೀದಿ ಮಾಡುವಾಗ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ನಾನು ದಾವಾ ಸ್ವತ್ತಿಗೇ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಗೆ ಯಾವ ರೀತಿ ಬಂದಿರುತ್ತದೆಂಬುದು ನಿಮಗೆ ಗೊತ್ತಿಲ್ಲವೆಂದರೆ ಸಾಕ್ಷಿ ಮುಂದುವರೆದು ಪಿತ್ರಾರ್ಜಿತವಾಗಿ ಬಂದಿರುತ್ತದೆಂದು ನುಡಿಯುತ್ತಾರೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ. ದಾವಾ ಸ್ವತ್ತಿನ ಪಶ್ಚಿಮ ಭಾಗಕ್ಕೆ ಹಳ್ಳ ಇರುತ್ತದೆ. ನೀವು ದಾಖಲೆಗಳನ್ನು ಪರಿಶೀಲಿಸಿದ ಕಡಿಮೆ ಬೆಲೆಗೆ ಕ್ರಯದ ಕರಾರುಪತ್ರ ಮಾಡಿಕೊಂಡಿರುತ್ತೀರೆಂದರೆ ಸರಿಯಲ್ಲ.

3. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಆಗಿರುವುದರಿಂದ 1 ನೇ ಪ್ರತಿವಾದಿಯ ಸಹೋದರ ಹಾಗೂ ಸಹೋದರಿಯರಿಗೆ ಹಕ್ಕು ಇರುತ್ತದೆಂದರೆ ಸರಿಯಲ್ಲ. ನಿಪಿ-1 ಕ್ಕೆ ಪ್ರತಿವಾದಿಯರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಪಿಳ್ಳೇಗೌಡರಿಗೆ ಅಕ್ಷತಾ ಎಂಬ ಹೆಣ್ಣು ಮಗಳು ಇರುತ್ತಾಳೆಂದರೆ ಸರಿ. ಕ್ರಯಪತ್ರವಾಗುವ ಮೊದಲು

ಅಕ್ಷತಾರವರು ಮದುವೆಯಾಗಿ ಅವರ ಮನೆಯಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

4. ನಿಪಿ-1 ನ್ನು 35 ತಿಂಗಳು ಅವಧಿಗೆ ಕ್ರಯದ ಕರಾರುಪತ್ರವನ್ನು ಮಾಡಿಕೊಂಡಿರುತ್ತೇವೆ. ಉಳಿದ 20,000/- ರೂ.ಗಳನ್ನು ನೀಡಲು ನಿಮಗೆ 35 ತಿಂಗಳು ಕಾಲವಕಾಶ ಬೇಕಾಗಿರಲಿಲ್ಲವೆಂದರೆ ಸರಿಯಲ್ಲ. ಆದರೆ ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಅಷ್ಟು ದಿನಗಳು ಬೇಕೆಂದು ಸಮಯ ತೆಗೆದುಕೊಂಡಿರುತ್ತಾರೆ.

5. ನಿಪಿ-1 ನ್ನು ಶಶಿಕುಮಾರ್ ಎಂಬುವವರು ತಯಾರು ಮಾಡಿರುತ್ತಾರೆ. 1 ನೇ ಪ್ರತಿವಾದಿ ಮಾಹಿತಿ ನೀಡಿರುತ್ತಾರೆ. ನಾನು ಮಾಹಿತಿ ನೀಡಿರುವುದಿಲ್ಲ. ನಿಪಿ-1 ಕ್ಕೆ ಕೃಷ್ಣೇಗೌಡ, ಕೆಂಪೇಗೌಡ ರವರು ಸಹಿ ಮಾಡಿರುತ್ತಾರೆ. ಸದರಿಯವರು ನಿಮಗೆ ವಿಶ್ವಾಸಿಗಳು ಎಂದರೆ ಸರಿ. ಪ್ರತಿವಾದಿಯರು ಯಾವುದೇ ರೀತಿಯಾದಂತಹ ನಿಪಿ-1 ಕ್ರಯದ ಕರಾರುಪತ್ರ ಮಾಡಿಕೊಟ್ಟಿರುವುದಿಲ್ಲ , ನೀವು ಸೃಷ್ಟಿ ಮಾಡಿರುತ್ತೀರಾ ಎಂದರೆ ಸರಿಯಲ್ಲ.

6. ನಾನು ನೋಟಿಸ್ ನ್ನು ದಿಃ 05.10.2017 ರಂದು 35 ತಿಂಗಳ ಒಳಗಡೆ ನೀಡಿರುತ್ತೇನೆ. ನಿಮ್ಮ ಹಾಗೂ ಪ್ರತಿವಾದಿಯರ ನಡುವೆ ಹಣದ ವ್ಯವಹಾರ ನಡೆಯದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬೆಲೆ 40 ಲಕ್ಷ ರೂ. ಬೆಲೆಯಾಗಿರುತ್ತದೆ ಆದುದರಿಂದ ಸದರಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಯರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಕಾಲವಕಾಶ ನೀಡಲಾಯಿತು.</u>

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಸಾ.ಓ.ಹೇ.ಸ.ಇದೆ.**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಪಾಂಡವಪುರ.**